# IN THE COURT OF THE ADDL. SENIOR CIVIL JUDGE & JMFC., GUBBI
# **OS – 18/2017**

Witness present and duly sworn on : 25.04.2024.

Further cross Examination: by Counsel for Defendant No.2 to 6, 8 and 9 :

ದಿನಾಂಕಃ 11.01.2016 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ತಾಯಿಗೆ ತಿಳುವಳಿಕೆ ಪತ್ರ ನೀಡಿದ್ದೇನೆ ಎಂದರೆ ಭಾಗ ಜಮೀನು ಕೋಡಿ ಎಂದು ನೀಡಿದ್ದೇವು. ಸದರಿ ತಿಳುವಳಿಕೆ ಪತ್ರಕ್ಕೆ ಅವರುಗಳು ಕೊಡುವುದಿಲ್ಲ ಎಂದು ಉತ್ತರ ನೀಡಿದ್ದರು. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಉಳಿದ ಪ್ರತಿವಾದಿಗಳಿಗೆ ತಿಳುವಳಿಕೆ ಪತ್ರ ಕೊಟ್ಟಿಲ್ಲ . ಅವರುಗಳು ಆಸ್ತಿಯ ಬಗ್ಗೆ ಗೊತ್ತಿಲ್ಲದೆ ಇದ್ದ ಕಾರಣ ನೋಟಿಸ್ ಕೊಟ್ಟಿಲ್ಲ ಎಂದರೆ 1 ನೇ ಪ್ರತಿವಾದಿ ಮತ್ತು ಅವರ ತಾಯಿಗೆ ತಿಳುವಳಿಕೆ ಪತ್ರ ಕೊಟ್ಟಿರುವ ಕಾರಣ ಉಳಿದ ಪ್ರತಿವಾದಿಗಳಿಗೆ ಕೊಡಲಿಲ್ಲ. 1 ನೇ ಪ್ರತಿವಾದಿ ಉಮಾರವರೊಂದಿಗೆ ದಾವಾ ಹಾಕುವ ಸಂದರ್ಭದಲ್ಲಿ ನಾವು ಅವರೊಂದಿಗೆ ಚೆನ್ನಾಗಿ ಇದ್ದೇವು ಎಂದರೆ ಸರಿಯಲ್ಲ. ನಾನು ಅವರ ಜೋತೆ ಸೇರಿಕೊಂಡು ಉದ್ದೇಶಪೂರ್ವಕವಾಗಿ ತಿಳುವಳಿಕೆ ಪತ್ರ ಕೊಟ್ಟು ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಕೋಡಿಮುದ್ದೇನಹಳ್ಳಿ ಪಟೇಲ್ ತಿಮ್ಮೆಗೌಡ ನನ್ನ ತಾಯಿಯ ತಂದೆ. ದಾವಾ ಹಾಕಿದ ನಂತರ ನಮ್ಮ ಬಗ್ಗೆ ವಿಚಾರಿಸಿದಾಗ ಕೋಡಿಮುದ್ದೇನಹಳ್ಳಿ ಪಟೇಲ್ ತಿಮ್ಮೆಗೌಡರವರ ವಂಶಕ್ಕೆ ಸೇರಿದವರೆಂದು ತಿಳಿಯಿತು ಎಂದರೆ ಸರಿಯಲ್ಲ. 1 ಮತ್ತು 3 ನೇ ವಾದಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ ಕೋಡಿಮುದ್ದೇನಹಳ್ಳಿ ಮತದಾರರ ಪಟ್ಟಿ ಮತ್ತು ಇತರೆ ದಾಖಲೆಗಳನ್ನು ಪರೀಶಿಲಿಸಿದ ನಂತರ ನಮ್ಮ ತಂದೆಯ ಹೆಸರು ಕೋಡಿಮುದ್ದೇನಹಳ್ಳಿ ನರಸೇಗೌಡ ಎಂದು ತಿಳಿಯಿತು ಎಂದರೆ ನನ್ನ ತಂದೆ ನರಸೇಗೌಡ ಆದರೆ, ಸಾಕ್ಷಿ

ಮುಂದುವರೆದು ಅವರಿಗೆ ಕೋಡಿಮುದ್ದೇನಹಳ್ಳಿ ಯಾವುದೇ ದಾಖಲೆಗಳು ಇರಲಿಲ್ಲ. ಕೋಡಿಮುದ್ದೇನಹಳ್ಳಿ ಮತದಾರರ ಪಟ್ಟಿಯಲ್ಲಿ ನನ್ನ ತಂದೆಯ ಹೆಸರು ನರಸೀಗೌಡ ಎಂದು ಇದೆ ಎಂದರೆ ಸರಿ. ಅದೇ ರೀತಿ ನರಸಿಂಹಮೂರ್ತಿ ತಂದೆಯ ಹೆಸರು ನರಸೀಗೌಡ ಎಂದು ನಮೂದು ಇದೆ ಎಂದರೆ ಸರಿ. ನನ್ನ ತಂದೆಯ ನರಸೀಗೌಡ ರವರ ಜೀವಿತ ಕಾಲದಲ್ಲಿ ಮತದಾರರ ಪಟ್ಟಿಯಲ್ಲಿ ಅವರ ತಂದೆಯ ಹೆಸರು ಚಿಕ್ಕನರಸಯ್ಯ ಎಂದು ನಮೂದು ಇರುತ್ತದೆ. ಅದನ್ನು ತೋರಿಸಲು ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಕೆಂಬಳಲು ಅಮಾನಿಕೆರೆ ಗ್ರಾಮದ, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕಿಗೆ ಸೇರಿದ ಸರ್ವೆ ನಂ.58/1 ರಲ್ಲಿ 2 ಎಕರೆ ಜಮೀನು ನರಸೀಗೌಡರವರ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಸೀನಪ್ಪನಹಳ್ಳಿ ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕಿಗೆ ಸೇರಿದ ಸರ್ವೆ ನಂ.14/4 ರಲ್ಲಿ 2 ಎಕರೆ 38 ಗುಂಟೆ ಮತ್ತು ಸರ್ವೆ ನಂ.14/5 ರಲ್ಲಿ 4 ಎಕರೆ 7 ಗುಂಟೆ ಜಮೀನು ನರಸೀಗೌಡರವರ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಕೋಡಿಮುದ್ದೇನಹಳ್ಳಿ ಗ್ರಾಮದ ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕಿಗೆ ಸೇರಿದ ಸರ್ವೆ ನಂ.35/2 ರಲ್ಲಿ 35 ಗುಂಟೆ ಜಮೀನು ಅಕ್ಕಮ್ಮನವರ ಹೆಸರಿಗೆ ಇದೆ ಎಂದರೆ ಮುಂಚೆ ಇತ್ತು ಈಗ ಇರುವುದಿಲ್ಲ. ಸದರಿ ಅಕ್ಕಮ್ಮ ನನ್ನ ತಾಯಿ. ನನ್ನ ತಂದೆ ತಾಯಿಗೆ ಹುಷಾರಿಲ್ಲದೆ ಇದ್ದ ಸಮಯದಲ್ಲಿ ಸರ್ವೆ ನಂಬರ್ 35/2 ಆಸ್ತಿಯನ್ನು ಮಾರಾಟ ಮಾಡಿದೇನು. ಸದರಿ ಆಸ್ತಿಯನ್ನು ನನ್ನ ಮಾವ ವೆಂಕಟೇಶ್ವಪ್ಪ ನವರಿಗೆ ಮಾರಾಟ ಮಾಡಿದ್ದೇವೆ. ಯಾವಾಗ ಎಂದು ನನಗೆ ನೆನಪಿಲ್ಲ. ಕೋಡಿಮುದ್ದೇನಹಳ್ಳಿ ಗ್ರಾಮದಲ್ಲಿ ನಮಗೆ ಒಂದು ವಾಸದ ಮನೆ ಇದೆ ಎಂದರೆ ಸರಿಯಲ್ಲ. ನಾವು ಕೋಡಿಮುದ್ದೇನಹಳ್ಳಿ ಯಲ್ಲಿ ಇದ್ದಾಗ ವಾಸದ ಮನೆಯನ್ನು ನನ್ನ ಮಾವ ಹನುಮಂತೇಗೌಡರವರು ಪಡೆದರು. ಕೋಡಿಮುದ್ದೇನಹಳ್ಳಿ ಮತದಾರರ ಪಟ್ಟಿಯಲ್ಲಿ ಮನೆ ನಂಬರ್ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಕೋಡಿಮುದ್ದೇನಹಳ್ಳಿ ಯಲ್ಲಿ ವೆಂಕಟೇಶಪ್ಪನವರ ಮನೆ ಎಂದು ದಾವೆಯಲ್ಲಿ ಬರೆಸಿರುವುದಿಲ್ಲ. ಸೀನಪ್ಪ ನಹಳ್ಳಿಯಲ್ಲಿ ನಾನು ಗುಡಿಸಲು ವಾಸ ಇದ್ದೇನೆ. ಸದರಿ ವಿಷಯವನ್ನು ವಾದ ಪತ್ರದಲ್ಲಿ ಬರೆದಿರುವುದಿಲ್ಲ. ಮೇಲೆ ಹೇಳಿರುವ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿದ್ದು, ಅವರ ನಂತರ ನನ್ನ ಮತ್ತು

ನರಸಿಂಹಮೂರ್ತಿರವರ ಹೆಸರಿಗೆ ಬಂದಿದೆ ಎಂದರೆ ನನ್ನ ತಂದೆಗೆ ಯಾವುದೇ ಆಸ್ತಿ ಇರುವುದಿಲ್ಲ.

(Further cross examination deferred at the request of counsel for the defendants No.2 to 6, 8 and 9.)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi